ಸ್ಥಾಪನೆ : 1962
Estd.: 1962

ನೋಂದಣಿ ಸಂಖ್ಯೆ : 1952/ಆರ್.ಸಿ.ಯಸ್.ಆಫ್ 1962
Regd. No. 1952/R.C.S. of 1962
GSTIN : 29AAAAL1314M1ZN
PAN : AAAAL1314M

# ಎಲ್.ಐ.ಸಿ. ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,

ಲಿಕೋಬ್ಯಾಂಕ್ ರಸ್ತೆ, ಉಡುಪಿ – 576101

# L.I.C. EMPLOYEES' CO-OPERATIVE BANK LTD.,

Licobank Road, Udupi - 576101, Karnataka.(License No. DBOD (UBD) KA 313 P. dated 20th August 1982)
(0820) 2520826, 2534826 admin@licobank.com www.licobank.com
**Branch Office :**
**Jeevan Prakash Bldg., College Road,**
**Dharwad - 580 001.Ph. : 0836 - 2441572**

61st




## 2022-23

61st

# ANNUAL REPORT AND STATEMENT OF ACCOUNT

## ವಾರ್ಷಿಕ ಸಾಮಾನ್ಯ ಸಭೆ ಹಾಗೂ ವಾರ್ಷಿಕ ವರದಿ – ಲೆಕ್ಕಪತ್ರಗಳು

**Date of Meeting : Saturday 9th September 2023**

# ಎಲ್.ಐ.ಸಿ. ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.

**ಲಿಕೋಬ್ಯಾಂಕ್ ರೋಡ್, ಉಡುಪಿ – 576 101.**

## 2022–2023ನೇ ಸಾಲಿನ 61ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಬ್ಯಾಂಕಿನ **61**ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು **ದಿನಾಂಕ 09–09–2023 ರಂದು, ಶನಿವಾರ ಪೂರ್ವಾಹ್ನ 11–30ಕ್ಕೆ ಸರಿಯಾಗಿ, "ಲಿಕೋಬ್ಯಾಂಕು ವಜ್ರಮಹೋತ್ಸವ" ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ** ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭಾಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

<u>ವಿಷಯಗಳು:</u>

1. ಸ್ವಾಗತ
2. 61ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
3. 2021–2022ನೇ ಸಾಲಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
4. 2022–2023ನೇ ಸಾಲಿನ ನಿರ್ದೇಶಕ ಮಂಡಳಿ ವರದಿಯನ್ನು ಅಂಗೀಕರಿಸುವುದು.
5. 2022–2023ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಮತ್ತು ವರದಿಯನ್ನು ಪರಿಗಣಿಸುವುದು ಮತ್ತು ಅಂಗೀಕರಿಸುವುದು.
6. 2022–2023ನೇ ಸಾಲಿನ ನಿವ್ವಳ ಲಾಭ ಹಂಚಿಕೆಯನ್ನು ಅನುಮೋದಿಸುವುದು. (ಅನುಬಂಧ–I)
7. 2022–2023ನೇ ಸಾಲಿನ ಈ ಕೆಳಗಿನ ವೆಚ್ಚ ಮಂಜೂರಾದ ಮಿತಿಗಿಂತ ಹೆಚ್ಚಾಗಿರುವುದನ್ನು ಸ್ಥಿರೀಕರಿಸುವುದು.

ವಿವರ

| ಕ್ರ.ಸಂ. | ಲೆಕ್ಕ ಶೀರ್ಷಿಕೆ | 2022–23ಕ್ಕೆ ಮಂಜೂರಾದ ಮೊತ್ತ | 2022–23ಕ್ಕೆ ವಾಸ್ತವಿಕ ಮೊತ್ತ | ಹೆಚ್ಚಾದ ವೆಚ್ಚ |
|---|---|---|---|---|
| I | ನಿರ್ದೇಶಕರ ಮತ್ತು ಸ್ಥಳೀಯ ಸಮಿತಿ ಸದಸ್ಯರ ಶುಲ್ಕ | 1,15,000.00 | 1,79,437.00 | 64,437.00 |
| ii | ಅಂಚೆ ಮತ್ತು ದೂರವಾಣಿ ಮತ್ತು ತಂತಿಗಳು | 1,65,000.00 | 2,36,262.00 | 71,262.00 |
| iii | ಆಸ್ತಿಗಳ ಮೇಲಿನ ಸವಕಳಿ ಮತ್ತು ದುರಸ್ತಿ ಖರ್ಚು | 80,00,000.00 | 82,20,493.10 | 2,20,493.10 |
| iv | ಲೇಖನ ಸಾಮಾಗ್ರಿ, ಮುದ್ರಣ ಮತ್ತು ಜಾಹೀರಾತು | 4,50,000.00 | 5,60,891.32 | 1,10,891.32 |
| v | ಇತರೇ ಖರ್ಚುಗಳು | 13,00,000.00 | 27,44,633.27 | 14,44,633.27 |
| vi | ಸಂಭ್ಯಾವ್ಯ ಮುನ್ನೇರ್ಪಾಡುಗಳು ಮತ್ತು ಇತರೇ | 55,00,000.00 | 75,10,084.00 | 20,10,084.00 |

**ಕಾರಣ:**

(i) ನಿರ್ದೇಶಕರ ಮತ್ತು ಸ್ಥಳೀಯ ಸಮಿತಿ ಸದಸ್ಯರ ಶುಲ್ಕ: ಬ್ಯಾಂಕಿನ ಒಟ್ಟು 19 ನಿರ್ದೇಶಕರ ಪೈಕಿ 8 ನಿರ್ದೇಶಕರು ದೂರದ ಕಾರ್ಯಕ್ಷೇತ್ರವನ್ನು ಪ್ರತಿನಿಧಿಸುವವರಾಗಿದ್ದು, ಅಲ್ಪ ಪ್ರಮಾಣದ ಪ್ರಯಾಣ ದರದ ಏರಿಕೆಯಿಂದಾಗಿ ಸುಮಾರು **ರೂ. 64,437.00**ನ್ನು ಮಂಜೂರಾತಿ ಮೊತ್ತಕ್ಕಿಂತ ಹೆಚ್ಚುವರಿ ಹಣವನ್ನು ನಿರ್ದೇಶಕರ ಪ್ರವಾಸ ಭತ್ತೆಗಾಗಿ ವ್ಯಯಿಸಲಾಗಿರುತ್ತದೆ.

(ii) ಅಂಚೆ ಮತ್ತು ದೂರವಾಣಿ ಮತ್ತು ತಂತಿಗಳು: ವರದಿ ವರ್ಷದಲ್ಲಿ ಡಿಜಿಟಲ್ ಸೇವೆಗಳಲ್ಲಿ ಒಂದಾದ Rupay Card ಸೌಲಭ್ಯವನ್ನು ಗ್ರಾಹಕರಿಗೆ ಪರಿಚಯಿಸಿದ್ದು, Rupay Cardಗಳನ್ನು ಅಂಚೆ ಮೂಲಕ ಗ್ರಾಹಕರಿಗೆ ವಿತರಿಸಿದ್ದ ಕಾರಣ ಮಂಜೂರಾದ ಮೊತ್ತಕ್ಕಿಂತ ಪಾವತಿಸಿದ ಮೊತ್ತವು ಅಧಿಕವಾಗಿರುತ್ತದೆ.

(iii) ಆಸ್ತಿಗಳ ಮೇಲಿನ ಸವಕಳಿ ಮತ್ತು ದುರಸ್ತಿ ಖರ್ಚು: ಬ್ಯಾಂಕಿನ ಮುಖ್ಯ ಕಛೇರಿಯಲ್ಲಿರುವ ಸ್ವಂತ ದತ್ತಾಂಶ ಶೇಖರಣೆ(DC)ಗೆ ಹೊಸ Server(Data Base) ಖರೀದಿಸಲಾಗಿದ್ದು, ವರದಿ ವರ್ಷದಲ್ಲಿ ಸವಕಳಿ ಕಳೆದ ಕಾರಣ

ಮಂಜೂರಾದ ಮೊತ್ತಕ್ಕಿಂತ ಪಾವತಿಸಿದ ಮೊತ್ತ ರೂ.2,20,493.10 ಅಧಿಕವಾಗಿರುತ್ತದೆ.

(iv) ಲೇಖನ ಸಾಮಾಗ್ರಿ, ಮುದ್ರಣ ಮತ್ತು ಜಾಹೀರಾತು : ವರದಿ ವರ್ಷದಲ್ಲಿ Rupay Card ಮುದ್ರಿಸಿರುವ ಕಾರಣ ಸದ್ರಿ ಶೀರ್ಷಿಕೆಯಡಿಯಲ್ಲಿ ರೂ.1,10,891.32 ಹೆಚ್ಚುವರಿ ವ್ಯಯಿಸಲಾಗಿರುತ್ತದೆ.

(v) ಇತರ ಖರ್ಚುಗಳು: ಸರಕು ಮತ್ತು ಸೇವಾ ತೆರಿಗೆ ಖರ್ಚು, ಬ್ಯಾಂಕಿನ ಕಾವಲುಗಾರರ ವೇತನ, ಬ್ಯಾಂಕಿನ ಆವರಣಕ್ಕೆ ಇಂಟರ್‌ಲಾಕ್ ಅಳವಡಿಕೆ, ATM ಕೊಠಡಿ ನಿರ್ಮಾಣಕ್ಕೆ ಸಂಬಂಧಪಟ್ಟ ಕೆಲವು ಖರ್ಚುಗಳು ಇತ್ಯಾದಿಗಳು ಸದ್ರಿ ಶೀರ್ಷಿಕೆಯಡಿಯಲ್ಲಿ ವ್ಯಯಿಸಲಾಗಿರುವ ಕಾರಣ ಮಂಜೂರಾದ ಮೊತ್ತಕ್ಕಿಂತ ಪಾವತಿಸಿದ ಮೊತ್ತವು ರೂ.14,44,633.27 ಅಧಿಕವಾಗಿರುತ್ತದೆ.

(vi) ಸಂಭ್ಯಾವ್ಯ ಮುನ್ನೇರ್ಪಾಡುಗಳು ಮತ್ತು ಇತರೇ: ವರದಿ ವರ್ಷದಲ್ಲಿ ಕಳೆದ ಆರ್ಥಿಕ ವರ್ಷಗಳಿಗಿಂತ ಅಧಿಕ ಲಾಭ ಗಳಿಸಿದ್ದು, ಅದಕ್ಕೆ ತಕ್ಕುದಾಗಿ ಆದಾಯ ತೆರಿಗೆ ಪಾವತಿಸಿದ ಕಾರಣ ಮಂಜೂರಾದ ಮೊತ್ತಕ್ಕಿಂತ ಪಾವತಿಸಿದ ಮೊತ್ತವು ರೂ. 20,10,084.00 ಅಧಿಕವಾಗಿರುತ್ತದೆ.

8. 2023–24ನೇ ಸಾಲಿನ ಆಯ–ವ್ಯಯ ಪಟ್ಟಿಯನ್ನು ಘಟನ್ನೋತ್ತರ ಅನುಮೋದಿಸುವುದು.(ಅನುಬಂಧ II)

9. ಉಪವಿಧಿಗೆ ತಿದ್ದುಪಡಿ(ಅನುಬಂಧ III) ರಲ್ಲಿ ವಿವರಿಸಿದಂತೆ

10. 2022–23ನೇ ಸಾಲಿನ ಶಾಸನಾತ್ಮಕ ಲೆಕ್ಕ ಪರಿಶೋಧನಾ ವರದಿಗೆ ಸಲ್ಲಿಸಿದ ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅಂಗೀಕಾರ.

11. 2023–24ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಘಟನ್ನೋತ್ತರ ಅನುಮೋದಿಸುವುದು ಹಾಗೂ ಸಂಭಾವನೆ ನಿಗದಿಪಡಿಸುವುದು.

12. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ.

13. ಮುನ್ಸೂಚನೆಯ ಮೇರೆಗೆ ಅಧ್ಯಕ್ಷರ ಅನುಮತಿ ಮೇರೆಗೆ ಬರುವ ಇತರೇ ವಿಷಯಗಳು

14. ವಂದನಾರ್ಪಣೆ.

**ಆಡಳಿತ ಮಂಡಳಿಯ ಆದೇಶದ ಮೇರೆಗೆ**

**ಸ್ಥಳ : ಉಡುಪಿ**
**ದಿನಾಂಕ :01–08–2023**

**ಶಶಿಕಲಾ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**ಸೂಚನೆ:**
ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದಾದ ಇತರ ವಿಷಯಗಳೇನಾದರೂ ಇದ್ದಲ್ಲಿ ಅಥವಾ ಹೆಚ್ಚಿನ ವಿವರ ಬೇಕಾದಲ್ಲಿ ಉಪನಿಬಂಧನೆಯನುಸಾರ ಮಹಾಸಭೆಗೆ 72 ಘಂಟೆಗಳ ಮುಂಚಿತವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಅಂಥ ವಿಷಯಗಳನ್ನು ಚರ್ಚಿಸಲು ಅನುಮತಿ ಕೊಡಲಾಗುವುದು.

**(ಸಭೆಯ ದಿನ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ)**